ತಾತ್ಕಾಲಿಕ ಪಡಿತರ ಕೂಪನ್‌ನಲ್ಲಿ ಹೆಸರು, ಸಂಬಂಧ ಅಥವಾ ವಯಸ್ಸು ಇತ್ಯಾದಿ ಲೋಪದೋಷವಿದೆ ಎಂಬುದಾಗಿ ಸಾರ್ವಜನಿಕರು ಅಹವಾಲುಗಳನ್ನು ಸಲ್ಲಿಸಿರುತ್ತಾರೆ ಸಾರ್ವಜನಿಕರು ಅಹವಾಲುಗಳನ್ನು ನೊಂದಾಯಿಸಿಕೊಳ್ಳಲು ಪ್ರತಿ ತಾಲ್ಲೂಕು ಕೇಂದ್ರದಲ್ಲಿ ನೋಂದಣಿ ಕೇಂದ್ರವನ್ನು ತೆರೆದು 15 ದಿನಗಳ ಕಾಲ ಸದರಿ ನೋಂದಣಿ ಕೇಂದ್ರಗಳಲ್ಲಿ ಅಹವಾಲುಗಳು ನೊಂದಾಯಿಸಲಾಗಿರುತ್ತದೆ. ಅವಧಿ ಮೀರಿ ಸಲ್ಲಿಸುವ ಅಹವಾಲುಗಳನ್ನು ಸ್ಥಳೀಯವಾಗಿ ಗ್ರಾಮ ಲೆಕ್ಕಾಧಿಕಾರಿ ಮತ್ತು ಗ್ರಾಮ ಪಂಚಾಯತ್ ಕಛೇರಿಗಳಲ್ಲಿಯೂ ಸಹ ಸ್ವೀಕರಿಸಲು ವ್ಯವಸ್ಥೆ ಮಾಡಲಾಗಿತ್ತು. ಅಹವಾಲುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿದೆ ಹಾಗೂ ವರ್ಗ ಬದಲಾವಣೆಗೆ ಅರ್ಹರಿರುವ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ಮುದ್ರಿಸಿ ನೀಡಲು ಜಿಲ್ಲೆಗಳಿಗೆ ಆದೇಶಿಸಿದೆ, ಹೊಸದಾಗಿ ಪಡಿತರ ಚೀಟಿ ಕೋರಿ ಬಂದ ಅಹವಾಲುಗಳನ್ನು ಮರು ಪರಿಶೀಲಿಸಲು ತಿಳಿಸಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1296(1762)
ಸದಸ್ಯರ ಹೆಸರು : ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ)
ಉತ್ತರಿಸುವ ಸಚಿವರು : ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಪಡಿತರ ಚೀಟಿಗಳಲ್ಲಿ ವಿತರಿಸುವ ಆಹಾರ ಪದಾರ್ಥಗಳನ್ನು ಒಂದು ಕುಟುಂಬದ 5 ಜನರಿಗೆ ಮಾತ್ರ ನೀಡಲು ಹೊಸ ಪಡಿತರ ವಿತರಣೆಯನ್ನು ಜಾರಿಗೆ ತರು ಸರ್ಕಾರ ಉದ್ದೇಶಿಸಿದೆಯೇ;

ಬಿಪಿಎಲ್ ಪಡಿತರ ಚೀಟಿದಾರರಿಗೆ ಫೆಬ್ರವರಿ 2007ರ ಮಾಹೆಯಿಂದ ಯೂನಿಟ್ ಆಧಾರದ ಮೇಲೆ ಆಹಾರಧಾನ್ಯ ವಿತರಿಸುವ ಪದ್ಧತಿ ಜಾರಿಗೆ ತರಲಾಗಿದೆ. ಅದರಂತೆ, ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ 4 ಕೆಜಿ ಅಕ್ಕಿ, 1 ಕೆಜಿ ಗೋದಿ/ರಾಗಿ, (ಪ್ರತಿ ಬಿಪಿಎಲ್ ಪಡಿತರ ಚೀಟಿಗೆ ಗರಿಷ್ಟ 25 ಕೆಜಿ ಅಕ್ಕಿ/ಗೋಧಿ/ರಾಗಿ ಮಿತಿಗೆ ಒಳಪಟ್ಟು) ನೀಡಲಾಗುತ್ತಿದೆ. ಅಂತ್ಯೋದಯ ಅನ್ನಯೋಜನೆಯಡಿಯಲ್ಲಿನ ಪಡಿತರ ಚೀಟಿದಾರರಿಗೆ ಕೇಂದ್ರ ಸರ್ಕಾರವು ನೀಡುತ್ತಿರುವಂತೆ 28 ಕೆಜಿ ಅಕ್ಕಿ, 6 ಕೆಜಿ ಗೋಧಿ ಹಂಚಿಕೆ ನೀಡಲಾಗುತ್ತಿದೆ.

ಅದರಂತೆ ಏಕಸದಸ್ಯರಿಂದ 5 ಸದಸ್ಯರಿರುವ ಕುಟುಂಬಗಳು ಪಡೆಯುವ ಆಹಾರಧಾನ್ಯದ ಪ್ರಮಾಣ ಈ ಕೆಳಕಂಡಂತಿರುತ್ತದೆ:–

ಕ್ರ ಸಂ.	ಕುಟುಂಬದ ಸದಸ್ಯರ ಸಂಖ್ಯೆ	ವಿತರಿಸುವ ಆಹಾರಧಾನ್ಯ ಪ್ರಮಾಣ	
		ಅಕ್ಕಿ	ಗೋಧಿ
1	ಏಕಸದಸ್ಯ	4 ಕೆಜಿ	1 ಕೆಜಿ
2	ದ್ವಿಸದಸ್ಯ	8 ಕೆಜಿ	2 ಕೆಜಿ
3	ತ್ರಿ ಸದಸ್ಯ	12 ಕೆಜಿ	3 ಕೆಜಿ

4	4 ಸದಸ್ಯ	16 ಕೆಜಿ	4 ಕೆಜಿ
5	5 ಮತ್ತು ಅದಕ್ಕಿಂತ ಮೇಲ್ಪಟ್ಟ ಸದಸ್ಯ	20 ಕೆಜಿ	5 ಕೆಜಿ

ಆ) ಹಾಗಿದ್ದಲ್ಲಿ, ಇದರಿಂದ ಬಡ ಕುಟುಂಬಗಳಿಗೆ ತೊಂದರೆಯಾಗುವುದಿಲ್ಲವೇ;

ತೊಂದರೆಯಾಗುವುದಿಲ್ಲ.

ಇ) ಪಡಿತರ ಆಹಾರ ಪದಾರ್ಥಗಳನ್ನು ಬಡವರು ತೆಗೆದುಕೊಳ್ಳುವುದರಿಂದ ಹಾಗೂ ಒಂದೊಂದು ಕುಟುಂಬಗಳಲ್ಲಿ 5 ಕ್ಕಿಂತ ಹೆಚ್ಚು ಜನರಿರುವುದರಿಂದ, ಈ ಹೊಸ ನೀತಿಯನ್ನು ಹಿಂದಕ್ಕೆ ಪಡೆಯಲಾಗುವುದೇ?

ಬಹುತೇಕ ಬಡ ಕುಟುಂಬಗಳು ಗ್ರಾಮಾಂತರ ಪ್ರದೇಶದಲ್ಲಿ ಎಸ್‌ಜಿಆರ್‌ವೈ ಯೋಜನೆಯಡಿ ಮತ್ತು ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಡಿ ನೊಂದಾಯಿತ ಬಿಪಿಎಲ್ ಕುಟುಂಬಗಳೇ ಆಗಿದ್ದು ಇವರುಗಳು ಸದರಿ ಯೋಜನೆಯಿಂದ ಪಡೆಯುವ ಆಹಾರಧಾನ್ಯವನ್ನು ಉಪಯೋಗಿಸುವುದರಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯ ಆಹಾರಧಾನ್ಯ ಎತ್ತುವಳಿಯಾಗುವ ಪ್ರಮಾಣ ಕಡಿಮೆಯಾಗಿರುತ್ತದೆ. ಇದರಿಂದಾಗಿ ನ್ಯಾಯಬೆಲೆ ಅಂಗಡಿಯವರು ಇದರ ಲಾಭ ಪಡೆಯುವುದನ್ನು ತಪ್ಪಿಸಿದಂತಾಗುತ್ತದೆ.ಬಡ ಕುಟುಂಬಗಳಿಗಾಗಿಯೇ ರಾಜ್ಯದ ಮತ್ತು ಕೇಂದ್ರ ಸರ್ಕಾರದ ಯೋಜನೆಗಳು ರೂಪಿತವಾಗಿರುವುದರಿಂದ ಈ ನೀತಿಯನ್ನು ತೆಗೆದು ಹಾಕುವ ಅಗತ್ಯವಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1297(1763)
ಸದಸ್ಯರ ಹೆಸರು : ಶ್ರೀ ಸೋಮಣ್ಣ ವಿ.(ಬಿನ್ನಿಪೇಟೆ)
ಉತ್ತರಿಸುವ ಸಚಿವರುಟ : ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಅರ್ಹ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳೆಷ್ಟು;

ರಾಜ್ಯದಲ್ಲಿ ಪ್ರಸ್ತುತ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿತರಿಸಿರುವ ತಾತ್ಕಾಲಿಕ ಪಡಿತರ ಕೂಪನ್ ಹಾಗೂ ಬೆಂಗಳೂರು ಅಪ ಪ್ರದೇಶ ಹಾಗೂ ಬೆಂಗಳೂರು ನಗರ ಜಿಲ್ಲೆಯ 7 ನಗರಸಭೆ ಸೇರಿಕೊಂಡು ಈ ವಿವರ ಕೆಳಕಂಡಂತಿದೆ.

ಎಎವೈ – 11,75,912
ಬಿಪಿಎಲ್ – 53,87,103